**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 36/2024**

**ಚಾ.ಸಾಃ 8, ಫ್ರಾ.ಸಾಃ 5**

| | |
|---|---|
| ಸಾಕ್ಷಿದಾರನ ಹೆಸರು | ಸುಬ್ರಹ್ಮಣ್ಯ ಅಂಬಿಗ |
| ತಂದೆಯ ಹೆಸರು | ಗಣಪಯ್ಯ ಅಂಬಿಗ |
| ವಯಸ್ಸು | 39 ವರ್ಷಗಳು |
| ಉದ್ಯೋಗ | ತರಕಾರಿ ವ್ಯಾಪಾರ |
| ವಾಸ್ತವ್ಯ | ಮುಗ್ವಾ ಸುಬ್ರಹ್ಮಣ್ಯ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 21-08-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ.

ನಾನು ಕಳೆದ ಆರು ವರ್ಷಗಳಿಂದ ಚಾಸಾ-1ರವರ ತರಕಾರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ 25-11-2023 ರಂದು ಸಂಜೆ 05-00 ರ ಸಮಯಕ್ಕೆ ನಾನು ತರಕಾರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅಂಗಡಿ ಮುಂಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಅಪಘಾತದ ಶಬ್ದ ಕೇಳಿತು. ತಕ್ಷಣ ನಾನು ಹೋಗಿ ನೋಡಿದಾಗ ಬೈಕು ಮತ್ತು ಕಾರು ಮುಖಾ ಮುಖಿ ಡಿಕ್ಕಿಯಾಗಿತ್ತು. ಬೈಕಿನಲ್ಲಿ ಎರಡು ಜನ ಇದ್ದು ಅವರು ಕೆಳಗೆ ಬಿದ್ದಿದ್ದರು ಮತ್ತು ಅವರಿಗೆ ಪೆಟ್ಟಗಿದ್ದು ಒಂದು ರಿಕ್ಷಾದಲ್ಲಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು.

ನಂತರ ಚಿಕಿತ್ಸೆ ಪಡೆಯುತ್ತಿದ್ದ ಹಿಂಬದಿ ಸವಾರಳಾದ ತ್ರಿವೇಣಿ ಮೃತಪಟ್ಟಿರುವುದಾಗಿ ಗೊತ್ತಾಯಿತು. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಯಾರ ತಪ್ಪಿನಿಂದ ಅಪಘಾತ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕ 25-11-2023 ರಂದು ಸಂಜೆ 05-00 ರ ಸಮಯಕ್ಕೆ ನಾನು ನಮ್ಮ ತರಕಾರಿ ಅಂಗಡಿಯ ಎದುರಿಗೆ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ನಿಂತಿದ್ದಾಗ ಈಗ ನ್ಯಾಯಾಲಯದ ಮುಂದಿರುವ ಆರೋಪಿಯು ತನ್ನ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ

ಚಲಾಯಿಸಿಕೊಂಡು ಬಂದು ತನ್ನ ಮುಂದೆ ಹೋಗುತ್ತಿದ್ದ ಮೋಟಾರು ಸೈಕಲ್ಲನ್ನು ಓವರಟೇಕ್ ಮಾಡಲು ರಸ್ತೆಯಲ್ಲಿ ಬಲಬದಿಗೆ ಚಲಾಯಿಸಿದ್ದು ಆ ವೇಳೆಗೆ ಹೊನ್ನಾವರ ಕಡೆಯಿಂದ ಒಂದು ಬೈಕ್ ಬರುತ್ತಿದ್ದು ಆತ ಸದರಿ ವಾಹನವನ್ನು ಓವರಟೇಕ್ ಮಾಡಿ ರಸ್ತೆಯ ಬಲಬದಿಯಲ್ಲಿ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಎದುರಿನಿಂದ ಬರುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಬೈಕನಲ್ಲಿದ್ದವರಿಗೆ ಗಾಯಗಳಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದ ಬೈಕಿನ ಹಿಂಬದಿ ಸವಾರ ಮೃತಪಟ್ಟಿದ್ದು ಸದರಿ ಅಪಘಾತಕ್ಕೆ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯೇ ಕಾರಣ ಎಂದರೆ ಸರಿಯಲ್ಲ. ಅಪಘಾತವನ್ನು ಕಣ್ಣಾರೆ ನೋಡಿದ್ದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-19 ಎಂದು ಗುರುತಿಸಲಾಯಿತು. ಅಪಘಾತವನ್ನು ಕಣ್ಣಾರೆ ನೋಡಿರುವುದಾಗಿ ನಿಪಿ-19 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ. ಎನ್. ಸುಬ್ರಹ್ಮಣ್ಯರವರು ಇಲ್ಲವೆಂದು ಹೇಳಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**